# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 18, ರಾಧಾಕೃಷ್ಣ ದೇವಸ್ಥಾನ.**

**ಸಂಖ್ಯೆ: ಸ.ಅ/ವಾ–18/ಪಿ.ಆರ್/05/2020–21** **ದಿನಾಂಕ:09–12–2020**

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್/35/2020–21 ದಿನಾಂಕ: 21–09–2020. ರವರ ಆದೇಶದಂತೆ ದಿನಾಂಕ: 05–12–2020 ರಂದು ವಾರ್ಡ್ ನಂ:18, ರಾಧಾಕೃಷ್ಣ ದೇವಸ್ಥಾನ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**:: ಸಭೆಗೆ ಹಾಜರಾಗಿದ್ದವರ ವಿವರಗಳು ::**

| ಕ್ರಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಎಸ್.ಬಸವರಾಜು. ಭಾ.ಆ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ. ಈ.ಈರಣ್ಣ. | ಸದಸ್ಯ ಕಾರ್ಯದರ್ಶಿ ವಾಡ್ ನಂ: 18 |
| 3. | ಡಾ.ಮಂಜುನಾಥ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) |
| 4. | ಶ್ರೀ. ನಾಗರಾಜ. | ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ) |
| 5. | ಶ್ರೀ ಆನಂದ್. | ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ. |
| 6. | ಶ್ರೀಮತಿ ಮಮತ. | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ: 18 |
| 7. | ಶ್ರೀ. ವಿವೇಕ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ: 18 |

ಪ್ರಾರಂಭಿಕವಾಗಿ ಸಭೆಯನ್ನು ಉದ್ದೇಶಿಸಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್‌ನಲ್ಲಿರುವ ನಿವಾಸಿಗಳ ಕ್ಷೇಮಾಬಿವೃದ್ಧಿ ಸಂಘದವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರು, ಅಧಿಕಾರಿ ನೌಕರುಗಳು ಮತ್ತು ಕ್ಷೇಮಾಬಿವೃದ್ಧಿ ಸಂಘದ ಸದಸ್ಯರು ಸೇರಿ ಸ್ವ-ಪರಿಚಯ ಮಾಡಿಕೊಳ್ಳಲಾಯಿತು.

ವಾರ್ಡಿನ ಅಧ್ಯಕ್ಷರು ಮಾತನಾಡುತ್ತಾ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ಹಾಗೂ ಕುಂದು ಕೊರತೆಗಳ ಬಗ್ಗೆ ಚರ್ಚಿಸಲಾಯಿತು.

- ಡ್ರೈವೇಜ್ ಸೆಂಟರ್ ಬಳಿ ಇರುವ ಜಂಕ್ ಆಟೋಗಳನ್ನು ಕೂಡಲೇ ತೆರವುಗೊಳಿಸಲು ಡಾ.ಮಂಜುನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಸೂಚಿಸಲಾಯಿತು.
- ವಾರ್ಡ್ ಕಛೇರಿಯ ಹಿಂಭಾಗದಲ್ಲಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಡಾ.ಮಂಜುನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಸೂಚಿಸಲಾಯಿತು.
- ವಿಷ್ಪರಿಂಗ್ ಮೆಡೋಸ್ ಮುಂಭಾಗದಲ್ಲಿರುವ ರಸ್ತೆಯ ಡಾಂಬರೀಕರಣವನ್ನು ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ಉದ್ಯಾನವನದಲ್ಲಿರುವ ಜಿಮ್ ಉಪಕರಣಗಳ ನಿರ್ವಹಣೆಯನ್ನು ಕೈಗೆತ್ತಿಕೊಳ್ಳುವಂತೆ ಕೆ.ಸಿ.ಮಂಜುಳ ಪರಿವೀಕ್ಷಕರು, ತೋಟಗಾರಿಕೆ ಇಲಾಖೆ, ಬಿ.ಬಿ.ಎಂ.ಪಿ ರವರಿಗೆ ತಿಳಿಸಲಾಯಿತು.
- ವೆಂಕಟಾಚಾರಿ ನಗರದ ರಸ್ತೆ ಬದಿಯಲ್ಲಿ ಬೆಳೆದಿರುವ ಗಿಡಗಳನ್ನು ತೆರವುಗೊಳಿಸಲು ವಾರ್ಡ್‌ನ ಸಹಾಯಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು ರವರುಗಳಿಗೆ ಸೂಚಿಸಲಾಯಿತು.

- ವೆಂಕಟಾಚಾರಿ ನಗರದ ರಸ್ತೆ ಬದಿಯ ಮೋರಿಯ ಮೇಲೆ ಅಳವಡಿಸಿರುವ ಚಪ್ಪಡಿ ಕಲ್ಲುಗಳಿಗೆ ಸಿಮೆಂಟ್ ಮಡ್ಡಿಯನ್ನು ಮಾಡಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ಅನುದಾನ ಲಭ್ಯವಿದ್ದಲ್ಲಿ ಆದ್ಯತೆಯ ಮೇರೆಗೆ ನಾಯ್ಡು ಬಡಾವಣೆಯಲ್ಲಿರುವ ರಸ್ತೆ ಮತ್ತು ಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ರೈಲ್ವೆ ಅಂಡರ್ ಪಾಸ್ ಬಳಿ ಬೀದಿ ದೀಪವನ್ನು ಅಳವಡಿಸಲು ಬೇಕಾಗಿರುವ ವಿದ್ಯುತ್ ಕಂಬಗಳಿಗೆ ಅಂದಾಜುಪಟ್ಟಿ ಸಲ್ಲಿಸಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಡಾಲರ್ಸ್ ಕಾಲೋನಿಯ 5ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆಯಲ್ಲಿರುವ ಒಳಚರಂಡಿಯನ್ನು ಸರಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳವರಿಗೆ ಸೂಚಿಸಲಾಯಿತು.
- ಗೆದ್ದಲಹಳ್ಳಿಯ ಭಾಗದಲ್ಲಿರುವ ಕುಡಿಯುವ ನೀರಿನ ಅನಧಿಕೃತ ಸಂಪರ್ಕಗಳನ್ನು ಕೂಡಲೇ ಸ್ಥಗಿತಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಲಾಯಿತು.
- ಎ.ಇ.ಸಿ.ಎಸ್ ಬಡಾವಣೆಯ 3ನೇ ಅಡ್ಡರಸ್ತೆಯಲ್ಲಿ ಶೇಖರಣೆಯಾಗಿರುವ ಹೂಳನ್ನು (ಸಿಲ್ಟ್) ಕೂಡಲೇ ತೆರವುಗೊಳಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸೂಚಿಲಾಯಿತು.
- ಬೀದಿ ದೀಪಗಳಿಗೆ ಟೈಮರ್‌ಗಳನ್ನು ಅಳವಡಿಸಲು ತಗಲುವ ವೆಚ್ಚಕ್ಕೆ ಅಂದಾಜಪಟ್ಟಿಯನ್ನು ಸಿದ್ದಪಡಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಲಾಯಿತು.
- ಎ.ಇ.ಸಿ.ಎಸ್ ಬಡಾವಣೆಯಲ್ಲಿ 2ನೇ ಅಡ್ಡರಸ್ತೆಯಲ್ಲಿ ಬೀದಿ ದೀಪವನ್ನು ಅಳವಡಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಲಾಯಿತು.
- ಈಗಾಗಲೇ ಬಳಕೆಯಾಗಿರುವ 50 ವಿದ್ಯುತ್ ದೀಪಗಳನ್ನು ಬಿ.ಇ.ಎಲ್ ರಸ್ತೆಗೆ ಅಳವಡಿಸಲು ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ರವರಲ್ಲಿ ಚರ್ಚಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಸಲಾಯಿತು.
- Gail ಸಂಸ್ಥೆಯವರಿಗೆ ಡಿಸೆಂಬರ್ ತಿಂಗಳಲ್ಲಿ 150 ಸಂಪರ್ಕಗಳನ್ನು ಕಲ್ಪಿಸಿ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.